ಅಸಲು ದಾವೆ ಸಂಖ್ಯೆ - 334/2012
ಪಿಡಬ್ಲ್ಯು - 04
ದಿನಾಂಕಃ 26.08.2023
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಎನ್ ಎಸ್ ಪಿ ವಕೀಲರಿಂದ</u>

ಈ ದಾವೆಯನ್ನು ಯಲ್ಲಮ್ಮ ಕೇದಾರಪ್ಪ ಬಾಬನಿ ಇವರು ಬಸೀರಹ್ಮದ ವಿರುದ್ಧ ಹೂಡಿರುತ್ತಾರೆ. ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರಕ್ಕೆ ಮಾಹಿತಿ ನಾನೇ ನೀಡಿದ್ದೇನೆ. ದಾವಾ ಆಸ್ತಿ ಎಂದರೆ ದಾರಿ ಸಲುವಾಗಿ ಇರುವ ಆಸ್ತಿ. ಸದರಿ ದಾರಿಯಲ್ಲಿ ವಾರ್ಡ ನಂ.4 ಪ್ಲಾಟ್ ನಂ.8 ರಲ್ಲಿ ಬರುತ್ತದೆ. ದಾರಿ ಇದ್ದ ಕುರಿತು ನಾನು ಯಾವುದೇ ದಾಖಲೆ ನೋಡಿಲ್ಲ. ಯಾವ ಆಧಾರದ ಮೇಲೆ ದಾರಿ ಇದೆ ಅಂತಾ ಹೇಳುತ್ತಿದ್ದೀರಿ ಎಂದರೆ ಅಲ್ಲಿ ಮೊದಲಿನಿಂದಲೂ ಸಾರ್ವಜನಿಕರು ಅಡ್ಡಾಡುತ್ತಿದ್ದರು ಅದನ್ನು ನೋಡಿದ್ದೇನೆ ಆದ್ದರಿಂದ ಹೇಳುತ್ತಿದ್ದೇನೆ. ಪ್ರತಿವಾದಿಯ ಗಂಡ 338/30 ಮತ್ತು 338/30/1 ಇವುಗಳನ್ನು ರಾಘವೇಂದ್ರಪ್ಪ ರಾಶಿನಕರ ಇವರ ಕಡೆಯಿಂದ ಖರೀದಿ ತೆಗೆದುಕೊಂಡಿರುತ್ತಾನೆ ಎಂದರೆ ಸರಿ. ಅದರಲ್ಲಿ 338/30/1 ರಲ್ಲಿ 2 ಗುಂಟೆ ಬಿಟ್ಟುಕೊಟ್ಟಿರುತ್ತಾನೆ ಎಂದರೆ ಸರಿ. ಆ ಪ್ರಕಾರ ಯಲ್ಲಮ್ಮನ ಹೆಸರು ಮುನಿಸಿಪಾಲಿಟಿಯಲ್ಲಿ ದಾಖಲಾಗಿರುತ್ತದೆ ಎಂದರೆ ಸರಿ. ಸದರಿ ಆಸ್ತಿಗಳ ದಕ್ಷಿಣಕ್ಕೆ ಮತ್ತು ಉತ್ತರಕ್ಕೆ ರಸ್ತೆ ಇರುತ್ತದೆ ಎಂದರೆ ದಕ್ಷಿಣಕ್ಕೆ ಮತ್ತು ಪಶ್ಚಿಮಕ್ಕೆ ದಾರಿ ಇರುತ್ತದೆ ಉತ್ತರಕ್ಕೆ ಇರುವುದಿಲ್ಲ. ಪೂರ್ವಕ್ಕೆ ಮಸೀದಿ ಆಸ್ತಿ ಇರುತ್ತದೆ ಎಂದರೆ ಸರಿ. ಮಸೀದಿ ಆಸ್ತಿಗೆ ಹೊಂದಿಕೊಂಡು ಯಲ್ಲಮ್ಮನ ಆಸ್ತಿ ಇರುತ್ತದೆ ಎಂದರೆ ಸರಿ. ಮಸೀದಿ ಆಸ್ತಿ ಮತ್ತು ಯಲ್ಲಮ್ಮನ ಆಸ್ತಿಯ ಮಧ್ಯ ದಾರಿ ಇರುವುದಿಲ್ಲ ಎಂದರೆ ಸರಿಯಲ್ಲ. ಮಸೀದಿ ಆಸ್ತಿ ಮತ್ತು ಯಲ್ಲಮ್ಮನ ಆಸ್ತಿ ಮದ್ಯ ರಸ್ತೆ ಇರುತ್ತದೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 30 ವರ್ಷಗಳಿಂದ ಸದರಿ ರಸ್ತೆಯನ್ನು ನೋಡುತ್ತಿದ್ದೇನೆ. ಮುನಿಸಿಪಾಲಿಟಿಯವರು ಅಲ್ಲಿ ಸಿಮೆಂಟ್ ರಸ್ತೆಯಾಗಲೀ ಅಥವಾ ಟಾರ್ ರೋಡ್ ಮಾಡಿಲ್ಲ. ಎಲ್ಲೆಲ್ಲಿ ರಸ್ತೆಗಳು ಇರುತ್ತವೆ ಅಲ್ಲಿ ಮುನಿಸಿಪಾಲಿಟಿಯವರು ಸಿಮೆಂಟ್ ಅಥವಾ ಟಾರ್ ರೋಡ್ ಮಾಡುತ್ತಾರೆ ಎಂದರೆ ಸರಿ. ಅಲ್ಲಿ ರಸ್ತೆ ಇದೆ ಅಂತಾ ತೋರಿಸಲು ಯಾವುದೇ ದಾಖಲೆಗಳು ಇರುವುದಿಲ್ಲ ಮತ್ತು ರಸ್ತೆ ಇರುವುದಿಲ್ಲ ಆದ್ದರಿಂದ ಅಲ್ಲಿ ಮುನಿಸಿಪಾಲಿಟಿಯವರು ರಸ್ತೆ ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ರಸ್ತೆ ಪೂರ್ವ ಪಶ್ಚಿಮ 22 ಪೂಟು, ಉತ್ತರ ದಕ್ಷಿಣ ಗದಗ ರಸ್ತೆಯವರೆಗೆ ಇರುತ್ತದೆ. ನಾನು ಅದನ್ನು ಅಳತೆ ಮಾಡಿಲ್ಲ. ಪೂರ್ವ ಪಶ್ಚಿಮ 22 ಪೂಟು ರಸ್ತೆ ಇರುವ ಕುರಿತು ಮುನಿಸಿಪಾಲಿಟಿಯಲ್ಲಿ ನಾನು ಯಾವುದೇ ದಾಖಲೆ ನೋಡಿಲ್ಲ. ನಾನು ಸ್ವತಃ ಅಳತೆ ಮಾಡಿಲ್ಲ. ಅಲ್ಲಿ ಯಾವುದೇ ದಾರಿ ಇರದಿದ್ದರೂ ಸಹ

ಬಸೀರಹ್ಮದ ಅಣ್ಣಗೇರಿ ಇವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಲ್ಲಮ್ಮ 10 ಪೂಟು ಅತೀಕ್ರಮಣ ಮಾಡಿರುತ್ತಾಳೆ. ಪ್ರತಿವಾದಿ ಯಲ್ಲಮ್ಮ ಮುನಿಸಿಪಾಲಿಟಿಯಿಂದ ಅನುಮತಿ ಪಡೆದು ಮನೆ ಕಟ್ಟಿಸುತ್ತಿದ್ದಳು ಎಂದರೆ ನನಗೆ ಗೊತ್ತಿಲ್ಲ. ಮುನಿಸಿಪಾಲಿಟಿಯವರು ಅನುಮತಿ ನೀಡಬೇಕಾದರೆ ಸಾರ್ವಜನಿಕ ಆಸ್ತಿಗಳನ್ನು ಅತೀಕ್ರಮಣ ಮಾಡದಂತೆ ಷರತ್ತು ವಿಧಿಸಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಯಲ್ಲಮ್ಮ 10 ಪೂಟು ಅತೀಕ್ರಮಣ ಮಾಡಿದ್ದನ್ನು ಅಳತೆ ಮಾಡಿರುತ್ತೇವೆ. 2-3 ವರ್ಷದ ಹಿಂದೆ ಅತೀಕ್ರಮಣ ಮಾಡಿದ್ದನ್ನು ಅಳತೆ ಮಾಡಿದ್ದೇನೆ. ಅಳತೆ ಮಾಡುವಾಗ ಬಾಬಾಸಾಬ ನಾನಮಲೀಕ, ಇಬ್ರಾಹಿಂಸಾಬ ಬಾಡ, ಸಲೀಂಅಹ್ಮದ ಮುಲ್ಲಾ, ಗೌಸಮೋದಿನ ಬಂಕಾಪೂರ, ಬಸೀರಹ್ಮದ ಅಣ್ಣಿಗೇರಿ, ಜಿಲಾನಿ ಬಂಕಾಪೂರ, ಗುಡ್ಡೇಸಾಬ ಚೌಪದಾರ, ಹಾಗೂ ಇತರರು ಇದ್ದರು. ನಾವು ಅಳತೆ ಮಾಡಿರುತ್ತೇವೆ ಅಂತಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಲ್ಲಮ್ಮ ಎಷ್ಟು ಉದ್ದ ಮತ್ತು ಅಗಲ ಅಳತೆಯಲ್ಲಿ ಮನೆ ಕಟ್ಟುತ್ತಿದ್ದಳು ಎಂದರೆ 20 ಪೂಟು ಅಗಲ 30 ಪೂಟು ಉದ್ದ ಜಾಗದಲ್ಲಿ ಮನೆ ಕಟ್ಟುತ್ತಿದ್ದಳು. ಅವಳ ಪಹಣಿಯಲ್ಲಿ ಎಷ್ಟು ಅಳತೆ ಇತ್ತೋ ಅಷ್ಟೇ ಜಾಗದಲ್ಲಿ ಮನೆ ಕಟ್ಟುತ್ತಿದ್ದಳು ಎಂದರೆ ಸರಿ. ಯಲ್ಲಮ್ಮ ಹೆಣ್ಣು ಮಗಳು ಆಗಿದ್ದರಿಂದ ಅವಳಿಗೆ ತೊಂದರೆ ಕೊಡಬೇಕು, ಅವಳ ಆಸ್ತಿ ತೆಗೆದುಕೊಳ್ಳಬೇಕು ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಲ್ಲಮ್ಮ ಇವರ ಆಸ್ತಿ ಮತ್ತು ಮಸೀದಿ ಆಸ್ತಿ ನಡುವೆ ಯಾವುದೇ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ, ಪೂರ್ವ ಪಶ್ಚಿಮ ರಸ್ತೆ ಇರುತ್ತದೆ. ಉತ್ತರ ದಕ್ಷಿಣವಾಗಿ ಯಾವುದೇ ರಸ್ತೆ ಇರುವುದಿಲ್ಲ ಎಂದರೆ ಇರುತ್ತದೆ. ಅಲ್ಲಿ ಯಾವುದೇ ರಸ್ತೆ ಇರದಿದ್ದರೂ ಯಲ್ಲಮ್ಮ ಅತೀಕ್ರಮಣ ಮಾಡದೇ ಮನೆ ಕಟ್ಟುತ್ತಿದ್ದರು ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.